**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಇವರು ನಿಯಮ-72ರಡಿ "ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 101 ಎಸ್‌ಆರ್‌ಡಿ 98(ಪಿ) ದಿನಾಂಕ:01.04.2004ರನ್ವಯ ಪರಿಷ್ಕರಿಸಿ ಆದೇಶಿಸಲಾಗಿದೆ. ಆದರೆ, ಕಳೆದ 18 ವರ್ಷಗಳಿಂದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸದೇ, ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪರಿವೀಕ್ಷಣಾಧಿಕಾರಿಗಳ ಹುದ್ದೆಗಳು ಸೇರ್ಪಡೆಗೊಳ್ಳದಿದ್ದರೂ, ಆ ಹುದ್ದೆಗಳಿಗೆ ಇಲಾಖೆಯಲ್ಲಿ ಪದೋನ್ನತಿ ನೀಡಲಾಗುತ್ತಿದ್ದು, ಇದರಿಂದ ಇಲಾಖೆಯ ಸಿಬ್ಬಂದಿಗಳಿಗೆ ಅನ್ಯಾಯವಾಗುತ್ತಿರುವ ಬಗ್ಗೆ ನಮಗೆ ಮನವಿ ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ" ಕೋರಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕ ಸಬಲೀಕರಣ ಸಚಿವರ ಉತ್ತರ:-**

1. ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 1988ರಲ್ಲಿ ಪ್ರತ್ಯೇಕಗೊಂಡಿದ್ದು, ಹಲವು ಕಚೇರಿ/ಸಂಸ್ಥೆ/ಶಾಲೆಗಳೊಂದಿಗೆ ಹುದ್ದೆಗಳ ಸಹಿತವಾಗಿ ವರ್ಗಾವಣೆಗೊಂಡಿರುತ್ತವೆ.

2. 1988ರಲ್ಲಿ ವರ್ಗಾವಣೆಗೊಂಡ ಹುದ್ದೆಗಳು ಹಾಗೂ ಸುಮಾರು 2000ನೇ ಇಸವಿಯವರೆಗೆ ವರ್ಗಾವಣೆ ಮತ್ತು ಸೃಜನೆಯಾದ ಹುದ್ದೆಗಳು ಸೇರಿದಂತೆ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 101 ಎಸ್‌ಆರ್‌ಡಿ 98(ಪಿ) ದಿನಾಂಕ:01.04.2004ರಲ್ಲಿ ಪ್ರಥಮ ಬಾರಿಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು ಜಾರಿಗೆ ಬಂದಿರುತ್ತವೆ.

3. ಸರ್ಕಾರದ ಅಧಿಸೂಚನೆ ದಿನಾಂಕ:01.04.2004ರಲ್ಲಿ ಈ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿದ್ದು, ಅದರಲ್ಲಿ ಅಪತ್ರಾಂಕಿತ ಅಧೀಕ್ಷಕರು ಒಟ್ಟು ಮಂಜೂರಾದ ಹುದ್ದೆಗಳು -06 (ಖಾಯಂ ಹುದ್ದೆಗಳು - 04 ಮತ್ತು ತಾತ್ಕಾಲಿಕ ಹುದ್ದೆಗಳು- 02) ಎಂದು ಸ್ಪಷ್ಟವಾಗಿ ನಮೂದಿಸಲಾಗಿದೆ.

4. ಸರ್ಕಾರದ ಆದೇಶ ಸಂಖ್ಯೆ:ಮಮಅ/291/ಪಿಹೆಚ್‌ಪಿ/2003, ದಿನಾಂಕ:01.10.2003ರಲ್ಲಿ ಸಮಾಜ ಸೇವಾ ಸಂಕೀರ್ಣ, ಬೆಂಗಳೂರು ಇಲ್ಲಿಗೆ ಒಂದು ಪರಿವೀಕ್ಷಣಾಧಿಕಾರಿ ದರ್ಜೆ-2 ಹುದ್ದೆಯು ಮಂಜೂರಾಗಿರುತ್ತದೆ.

5. ನಂತರ ಸರ್ಕಾರದ ಆದೇಶ ಸಂಖ್ಯೆ: ಮಮಇ 74 ಪಿಹೆಚ್‌ಪಿ 2010, ದಿನಾಂಕ:05.10.2010ರಲ್ಲಿ ಮಂದಮತಿ ಮಹಿಳೆಯರ ಅನುಪಾಲನಾ ಗೃಹ, ಬೆಂಗಳೂರು ಇಲ್ಲಿಗೆ 03 ಪರಿವೀಕ್ಷಣಾಧಿಕಾರಿ ದರ್ಜೆ-2 ಹುದ್ದೆಗಳನ್ನು ಹಾಗೂ ಮಂದಮತಿ ಮಹಿಳೆಯರ ಅನುಪಾಲನಾ ಗೃಹ, ಹುಬ್ಬಳ್ಳಿ ಇಲ್ಲಿಗೆ 01 ಪರಿವೀಕ್ಷಣಾಧಿಕಾರಿ ದರ್ಜೆ-2 ಹುದ್ದೆಯನ್ನು ಸೇರಿದಂತೆ ಒಟ್ಟು 04 ಪರಿವೀಕ್ಷಣಾಧಿಕಾರಿ ದರ್ಜೆ-2 ಹುದ್ದೆಗಳನ್ನು ಈ ಇಲಾಖೆಗೆ ವರ್ಗಾಯಿಸಲಾಗಿರುತ್ತದೆ.

6. ತದನಂತರ ಸರ್ಕಾರದ ಆದೇಶ ಸಂಖ್ಯೆ:ಮಮಇ 460 ಎಸ್‌ಜೆಡಿ 2002, ದಿ:26.10.2004ರಲ್ಲಿ ಹಿರಿಯ ನಾಗರಿಕರ ವಿಭಾಗಕ್ಕೆ 01 ಅಪತ್ರಾಂಕಿತ ಅಧೀಕ್ಷಕರ ಹುದ್ದೆಯನ್ನು ಮಂಜೂರು ಮಾಡಿದ್ದು, ಹೀಗೆ ಒಟ್ಟು 12 ಅಪತ್ರಾಂಕಿತ ಅಧೀಕ್ಷಕರ/ಪರಿವೀಕ್ಷಣಾಧಿಕಾರಿ ದರ್ಜೆ-2 (07 ಅಪತ್ರಾಂಕಿತ ಅಧೀಕ್ಷಕರು ಹಾಗೂ 05 ಪರಿವೀಕ್ಷಣಾಧಿಕಾರಿ ದರ್ಜೆ-2 ಹುದ್ದೆಗಳು ಮಂಜೂರಾಗಿರುತ್ತವೆ.

## ಅಪತ್ರಾಂಕಿತ ಅಧೀಕ್ಷಕರು/ಪರಿವೀಕ್ಷಣಾಧಿಕಾರಿ ದರ್ಜೆ-2 ವೃಂದದ ಮಂಜೂರು ಹುದ್ದೆಗಳ ವಿವರ

| ಕ್ರ. ಸಂ. | ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ | ಕಛೇರಿ ಹೆಸರು | ಸೃಜನೆಯಾದ ಹುದ್ದೆ ಪದನಾಮ | ಸಂಖ್ಯೆ |
|---|---|---|---|---|
| 01 | ಸಂಖ್ಯೆ:ಡಿಪಿಎಆರ್/101/ಎಸ್‌ಆರ್‌ಡಿ/98(ಪಿ), ದಿನಾಂಕ:01.04.2004 ವೃಂದ ಮತ್ತು ನೇಮಕಾತಿ ನಿಯಮಗಳು | ನಿರ್ದೇಶನಾಲಯ-04 ಮತ್ತು ವಸತಿ ನಿಲಯಗಳು-2 | ಅಪತ್ರಾಂಕಿತ ಅಧೀಕ್ಷಕರು | 06 |
| 02 | ಸಂಖ್ಯೆ:ಮಮಅ/291/ಪಿಹೆಚ್‌ಪಿ/2003, ದಿ:01.10.2003 | ಸಮಾಜ ಸೇವಾ ಸಂಕೀರ್ಣ, ಬೆಂಗಳೂರು | ಪರಿವೀಕ್ಷಣಾಧಿಕಾರಿ ದರ್ಜೆ-2 | 01 |
| 03 | ಸಂಖ್ಯೆ:ಮಮಇ 460 ಎಸ್‌ಜೆಡಿ 2002, ದಿ:26.10.2004 | ನಿರ್ದೇಶನಾಲಯ | ಅಪತ್ರಾಂಕಿತ ಅಧೀಕ್ಷಕರು | 01 |
| 04 | ಸಂಖ್ಯೆ: ಮಮಇ 74 ಪಿಹೆಚ್‌ಪಿ 2010, ದಿನಾಂಕ:05.10.2010. | ಮಂದಮತಿ ಮಹಿಳೆಯರ ಅನುಪಾಲನಾ ಗೃಹ, ಬೆಂಗಳೂರು | ಪರಿವೀಕ್ಷಣಾಧಿಕಾರಿ ದರ್ಜೆ-2 | 03 |
| | | ಮಂದಮತಿ ಮಹಿಳೆಯರ ಅನುಪಾಲನಾ ಗೃಹ, ಹುಬ್ಬಳ್ಳಿ | ಪರಿವೀಕ್ಷಣಾಧಿಕಾರಿ ದರ್ಜೆ-2 | 01 |
| | | | ಒಟ್ಟು | 12 |

7. ಪ್ರಸ್ತುತ ಜಾರಿಯಲ್ಲಿರುವ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು-2004ರ ನಂತರ ವರ್ಗಾಯಿಸಲಾದ 05 ಪರಿವೀಕ್ಷಣಾಧಿಕಾರಿ ದರ್ಜೆ-2 ಹಾಗೂ ಹೊಸದಾಗಿ ಸೃಜಿಸಲಾದ 01 ಅಪತ್ರಾಂಕಿತ ಅಧೀಕ್ಷಕರ ಹುದ್ದೆಯನ್ನು ತದನಂತರದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೇರ್ಪಡೆಗೊಳಿಸಿ ಪರಿಷ್ಕರಣೆಗೆ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

8. ಈ ಹಿನ್ನಲೆಯಲ್ಲಿ 2004ರ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಸ್ತಿತ್ವದಲ್ಲಿರುವ ಅಪತ್ರಾಂಕಿತ ಅಧೀಕ್ಷಕರ ಹುದ್ದೆಯ ವೇತನ ಶ್ರೇಣಿ ಹಾಗೂ ತದನಂತರ ಈ ಇಲಾಖೆಗೆ ವರ್ಗಾವಣೆಗೊಂಡ ಮತ್ತು ಸೃಜನೆಯಾದ ಅಪತ್ರಾಂಕಿತ ಅಧೀಕ್ಷಕರ ಮತ್ತು ಪರಿವೀಕ್ಷಣಾಧಿಕಾರಿ ದರ್ಜೆ-2 ಹುದ್ದೆಗಳ ವೇತನ ಶ್ರೇಣಿ ಒಂದೇ ಆಗಿರುತ್ತದೆ. (ವೇತನ ಶ್ರೇಣಿ ರೂ.37,900-7085)

9. ಇಲಾಖೆಯಲ್ಲಿರುವ ಅಪತ್ರಾಂಕಿತ ಅಧೀಕ್ಷಕರು/ಪರಿವೀಕ್ಷಣಾಧಿಕಾರಿ ದರ್ಜೆ-2ರ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಒಂದೇ ಜೇಷ್ಠತಾ ಪಟ್ಟಿಯಲ್ಲಿ ಸೇರಿಸಿ ಜೇಷ್ಠತಾ ಪಟ್ಟಿಯನ್ನು ಹೊರಡಿಸಲಾಗಿರುತ್ತದೆ.

10. ಆದ್ದರಿಂದ ಇಲಾಖೆಯಲ್ಲಿ ಈ ಹಿಂದಿನಿಂದಲೂ ಪ್ರಥಮ ದರ್ಜೆ ಸಹಾಯಕರ/ಯೋಜನಾ ಸಹಾಯಕರ ವೃಂದದಿಂದ ಅಪತ್ರಾಂಕಿತ ಅಧೀಕ್ಷಕರ ವೃಂದಕ್ಕೆ ಮುಂಬಡ್ತಿ ನೀಡುವಾಗ ಅದರ ಜೊತೆಗೆ ಪರಿವೀಕ್ಷಣಾಧಿಕಾರಿ ದರ್ಜೆ-2 ಹುದ್ದೆಗೂ ಕೂಡ ಮುಂಬಡ್ತಿ ನೀಡಲಾಗಿರುತ್ತದೆ. ಇಲಾಖೆಯಲ್ಲಿ ಅಪತ್ರಾಂಕಿತ ಅಧೀಕ್ಷಕರು/ ಪರಿವೀಕ್ಷಣಾಧಿಕಾರಿ ದರ್ಜೆ-2ರ ವೃಂದದಲ್ಲಿರುವ ಒಟ್ಟು ಎಲ್ಲಾ 12 ಹುದ್ದೆಗಳು ಖಾಲಿ ಇದ್ದುದರಿಂದ, ಸದರಿ ಹುದ್ದೆಗಳಲ್ಲಿ ಯಾವುದೇ ಸಿಬ್ಬಂದಿಗಳು ಇಲ್ಲದೇ ಕಛೇರಿ ಕೆಲಸಗಳನ್ನು ನಿಗದಿತ ಅವಧಿಯಲ್ಲಿ ಹಾಗೂ ಸಮರ್ಪಕವಾಗಿ ನಿರ್ವಹಿಸಲು ತೊಂದರೆಯುಂಟಾಗಿದ್ದರಿಂದ ಕಛೇರಿ ಕೆಲಸಗಳನ್ನು ನಿಗದಿತ ಅವಧಿಯಲ್ಲಿ ಹಾಗೂ ಸಮರ್ಪಕವಾಗಿ ನಿರ್ವಹಿಸಲು ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳು-2004ರನ್ವಯ ಅರ್ಹ ಸಿಬ್ಬಂದಿಗಳಿಗೆ ಅಪತ್ರಾಂಕಿತ ಅಧೀಕ್ಷಕರು / ಪರಿವೀಕ್ಷಣಾಧಿಕಾರಿ ದರ್ಜೆ-2ರ ಹುದ್ದೆಗೆ ನಿಯಮಾನುಸಾರ ಈ ಕೆಳಕಂಡಂತೆ ಮುಂಬಡ್ತಿ ನೀಡಲಾಗಿರುತ್ತದೆ

| ಕ್ರ. ಸಂ. | ಮುಂಬಡ್ತಿ ಆದೇಶ ಸಂಖ್ಯೆ ಮತ್ತು ದಿನಾಂಕ | ಮುಂಬಡ್ತಿ ನೀಡಿದ ಹುದ್ದೆಗಳ ಸಂಖ್ಯೆ | | |
|---|---|---|---|---|
| | | ಅಪತ್ರಾಂಕಿತ ಅಧೀಕ್ಷಕರು | ಪರಿವೀಕ್ಷಣಾಧಿಕಾರಿ ದರ್ಜೆ-2 | ಒಟ್ಟು |
| 1 | ನಿಅಕಇ/ಸಿಬ್ಬಂದಿ/ಸಿ/ಸ್ವಾಮುಂ/10-11, ದಿನಾಂಕ:04.09.2010 | 02 | 01 | 03 |
| 2 | ನಿಅಕಇ/ಸಿಬ್ಬಂದಿ/ಸಿ/ಸ್ವಾಮುಂ/10-11, ದಿನಾಂಕ:21.02.2011 | 01 | 04 | 05 |
| 3 | ನಿಅಕಇ/ಸಿಬ್ಬಂದಿ/ಸಿ/ಸ್ವಾಮುಂ/10-11, ದಿನಾಂಕ:31.03.2011 | - | 01 | 01 |

| | | | | |
|---|---|---|---|---|
| 4 | ನಿಅಕಇ/ಸಿಬ್ಬಂದಿ/ಸ್ವಾಮುಂ/2010-11/14-15, ದಿನಾಂಕ:08.07.2014 | 01 | - | 01 |
| 5 | ಇಸಿ/ಸಿಬ್ಬಂದಿ/02/ಎಫ್.ಡಿ.ಎ/ಮುಂಬಡ್ತಿ/2015-16, ದಿನಾಂಕ:31.05.2018 | 01 | 02 | 03 |
| 6 | ಇಸಿ/ಸಿಬ್ಬಂದಿ/02/ಎಫ್.ಡಿ.ಎ/ಮುಂಬಡ್ತಿ/2015-16/18-19 ದಿನಾಂಕ:30.07.2018 | 01 | - | 01 |
| | ಒಟ್ಟು | 06 | 08 | 14 |

11. ಪ್ರಸ್ತುತ ಅಪತ್ರಾಂಕಿತ ಅಧೀಕ್ಷಕರು / ಪರಿವೀಕ್ಷಣಾಧಿಕಾರಿ ದರ್ಜೆ-2ರ ವೃಂದದಲ್ಲಿ ಮಂಜೂರಾದ, ಭರ್ತಿಯಾದ ಮತ್ತು ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿರುವುದು.

| ಕ್ರ.ಸಂ | ಕಛೇರಿ | ಮಂಜೂರು | ಭರ್ತಿ | ಖಾಲಿ |
|---|---|---|---|---|
| 01 | ನಿರ್ದೇಶನಾಲಯ | 05 | 03 | 02 |
| 02 | ಸಮಾಜ ಸೇವಾ ಸಂಕೀರ್ಣ | 01 | 00 | 01 |
| 03 | ಅಂಗವಿಕಲ ತರಬೇತುದಾರರ ಮತ್ತು ನೌಕರರ ವಸತಿ ನಿಲಯ (ಪುರುಷರು) | 01 | 00 | 01 |
| 04 | ಅಂಗವಿಕಲ ತರಬೇತುದಾರರ ಮತ್ತು ನೌಕರರ ವಸತಿ ನಿಲಯ (ಮಹಿಳೆಯರು) | 01 | 00 | 01 |
| 05 | ಮಂದಮತಿ ಮಹಿಳೆಯರ ಅನುಪಾಲನಾ ಗೃಹ, ಬೆಂಗಳೂರು | 03 | 01 | 02 |
| 06 | ಮಂದಮತಿ ಮಹಿಳೆಯರ ಅನುಪಾಲನಾ ಗೃಹ, ಹುಬ್ಬಳ್ಳಿ | 01 | 00 | 01 |
| | ಒಟ್ಟು | 12 | 04 | 08 |

12. ಆದ್ದರಿಂದ ಇಲಾಖೆಯಲ್ಲಿ ಈ ಹಿಂದಿನಿಂದಲೂ ಅಪತ್ರಾಂಕಿತ ಅಧೀಕ್ಷಕರು/ಪರಿವೀಕ್ಷಣಾಧಿಕಾರಿ ದರ್ಜೆ-2ರ ವೃಂದದ ಹೆಚ್ಚಿನ ಹುದ್ದೆಗಳು ಖಾಲಿ ಇದ್ದುದರಿಂದ ಹಾಗೂ ಪ್ರಥಮ ದರ್ಜೆ ಸಹಾಯಕರ/ಯೋಜನಾ ಸಹಾಯಕರ ವೃಂದದ ಸಿಬ್ಬಂದಿಗಳು ಮುಂಬಡ್ತಿ ಇಲ್ಲದೇ ಅದೇ ಹುದ್ದೆಗಳಲ್ಲಿ ನಿವೃತ್ತಿ ಹೊಂದುವ ಸಂಭವವಿದ್ದುದರಿಂದ ಪ್ರಥಮ ದರ್ಜೆ ಸಹಾಯಕರ/ಯೋಜನಾ ಸಹಾಯಕರ ವೃಂದದಿಂದ ಅಪತ್ರಾಂಕಿತ ಅಧೀಕ್ಷಕರ ವೃಂದಕ್ಕೆ ಮುಂಬಡ್ತಿ ನೀಡುವಾಗ ಅದರ ಜೊತೆಗೆ ಪರಿವೀಕ್ಷಣಾಧಿಕಾರಿ ದರ್ಜೆ-2 ಹುದ್ದೆಗೂ ಕೂಡ ಇಲಾಖೆಯ ಸಿಬ್ಬಂದಿಗಳ ಸೇವಾ ಹಿತದೃಷ್ಟಿಯಿಂದ ಮುಂಬಡ್ತಿ ನೀಡಲಾಗಿರುತ್ತದೆ.

**ಸಂಖ್ಯೆ:** ಮಮಇ 533 ಪಿಸ್‌ಜಿಡಿ 2022

Halappa

**(ಆಚಾರ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂವಿಜ್ಞಾನ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖಾ ಸಚಿವರು.